Golden Educational and Social Charitable Trust's
# GOLDEN INTERNATIONAL SCHOOL
ಗೋಲ್ಡನ್ ಎಜುಕೇಶನಲ್ ಅಂಡ್ ಸೋಶಿಯಲ್ ಚಾರಿಟಬಲ್ ಟ್ರಸ್ಟ್
## ಗೋಲ್ಡನ್ ಇಂಟರ್‌ನ್ಯಾಷನಲ್ ಸ್ಕೂಲ್

Ref : Date :

ಸಂಖ್ಯೆ: GISCBSE/ADM/2018–19 31/01/2019

ಗೆ,

ಕ್ಷೇತ್ರ ಶಿಕ್ಷಣಾಧಿಕಾರಿಗಳು

ಮಾಲೂರು ತಾಲ್ಲೂಕು

ಮಾಲೂರು, ಕೋಲಾರ ಜಿಲ್ಲೆ,

ಮಾನ್ಯರೆ,

ವಿಷಯ: ನಮ್ಮ ಶಾಲೆಗೆ ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಮಂಡಳಿ (CBSE) ನವದೆಹಲಿ ಇವರಿಂದ ಮಾಧ್ಯಮಿಕ ತರಗತಿಗಳಲ್ಲಿ ಕೇಂದ್ರಿಯ ಪಠ್ಯಕ್ರಮವನ್ನು ಬೋಧಿಸಲು ಅನುಮತಿ ನೀಡಿರುವ ಬಗ್ಗೆ.

ಉಲ್ಲೇಖ: ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಮಂಡಳಿ, ದೆಹಲಿ ಇವರ ಪತ್ರ ಸಂಖ್ಯೆ: CBSE/Aff/ms-01058-1617/830660/2016/1078866
ದಿನಾಂಕ:19/05/2016

..........................................................................

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದನ್ವಯ ನಮ್ಮ ಶಾಲೆಗೆ ಮಾಧ್ಯಮಿಕ ಪಠ್ಯವನ್ನು 1 ರಿಂದ 8ನೇ ತರಗತಿಗಳಲ್ಲಿ ಅಳವಡಿಸಿಕೊಳ್ಳಲು 2016–17ರ ಶೈಕ್ಷಣಿಕ ವರ್ಷದಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ. ಅದರಂತೆ ಕೇಂದ್ರ ಪಠ್ಯಕ್ರಮವನ್ನು ಬೋಧಿಸಲು ಅವಶ್ಯಕವಿರುವ ಕಟ್ಟಡ, ಆಟದ ಮೈದಾನ, ಪ್ರಯೋಗಾಲಯ ಹಾಗೂ ಇತರೆ ಸಂಪನ್ಮೂಲಗಳನ್ನು ವ್ಯವಸ್ಥೆಗೊಳಿಸಿ 2018–19ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾಗಿರುತ್ತದೆ.

PRINCIPAL
Golden Independent
Pre-University College
Bagur Sonnenahalli, Malur Tq, Kolar Dist.

Ref :

Date :

ರಾಜ್ಯ ಪಠ್ಯಕ್ರಮದಲ್ಲಿ ಸುಮಾರು 400 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು ಇವರಿಗೆ ಅವಶ್ಯಕವಿರುವ ಕಟ್ಟಡ, ಪ್ರಯೋಗಾಲಯ, ಹಾಗೂ ಇನ್ನಿತರೆ ವ್ಯವಸ್ಥೆಗಳು ಪ್ರತ್ಯೇಕವಾಗಿರುತ್ತದೆ.

ಶಾಲೆಯ ಸುತ್ತಮುತ್ತಲಿನ ಪೋಷಕರು ಹಾಗೂ ವಿದ್ಯಾರ್ಥಿಗಳು ರಾಜ್ಯ ಪಠ್ಯಕ್ರಮದಿಂದ ಕೇಂದ್ರ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಲು ಆಶಯ ವ್ಯಕ್ತಪಡಿಸಿ ಸುಮಾರು 85 ವಿದ್ಯಾರ್ಥಿಗಳು 2018–19 ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದಿರುತ್ತಾರೆ ಹಾಗೂ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇನ್ನಷ್ಟು ವಿದ್ಯಾರ್ಥಿಗಳು ಸದರಿ ಪಠ್ಯಕ್ರಮದಲ್ಲಿ ಪ್ರವೇಶ ಪಡೆಯಲು ಉತ್ಸುಕರಾಗಿರುತ್ತಾರೆ.

ಈ ನಿಟ್ಟಿನಲ್ಲಿ ಶಾಲೆಯ ಆಡಳಿತ ಮಂಡಳಿಯು ತನ್ನ ತಿಂಗಳ ಸಭೆಯಲ್ಲಿ ಉತ್ಸುಕರಾಗಿರುವ ರಾಜ್ಯ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಕೇಂದ್ರ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಲು ಸಂಬಂಧಪಟ್ಟ ಇಲಾಖೆಗೆ ಈಗಾಗಲೆ ಮಾಹಿತಿ ತಿಳಿಸಿ ಪ್ರವೇಶಾವಕಾಶಕ್ಕೆ ಅನುಕೂಲ ಮಾಡಿಕೊಡಬೇಕೆಂಬ ಠರಾವು ತೆಗೆದುಕೊಳ್ಳಲಾಗಿದೆ.

ಆದ ಕಾರಣ ಸದರಿ ಪಠ್ಯಕ್ರಮದಿಂದ ಕೇಂದ್ರ ಪಠ್ಯಕ್ರಮಕ್ಕೆ ಈಗಾಗಲೆ ವರ್ಗಾಯಿಸಿರುವ ವಿದ್ಯಾರ್ಥಿಗಳನ್ನು ಹಾಗೂ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಆಸಕ್ತ ವಿದ್ಯಾರ್ಥಿಗಳನ್ನು ವರ್ಗಾಯಿಸಲು ಅನುಮತಿ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಲಾಗಿದೆ.

ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಮಂಡಳಿ, ದೆಹಲಿ ಇದರ ಅನುಮತಿ ಆದೇಶದ ಪ್ರತಿ, ಆಡಳಿತ ಮಂಡಳಿಯ ಠರಾವಿನ ಪ್ರತಿ 2018–19ನೇ ಸಾಲಿಗೆ ರಾಜ್ಯ ಪಠ್ಯಕ್ರಮದಿಂದ ಕೇಂದ್ರ ಪಠ್ಯಕ್ರಮಕ್ಕೆ ವರ್ಗಾಯಿಸಿರುವ ವಿದ್ಯಾರ್ಥಿಗಳ ಪಟ್ಟಿ ಹಾಗೂ ಇನ್ನಿತರೆ ದಾಖಲೆಗಳನ್ನು ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಪತ್ರಕ್ಕೆ ಲಗತ್ತಿಸಿದೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ

PRINCIPAL
Golden Independent
Pre-University College